ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಗೋಬರ್ ಧನ ಘಟಕದ ಮೂಲಕ ತ್ಯಾಜ್ಯವನ್ನು ಸಂಪನ್ಮೂಲವನ್ನಾಗಿಸುತ್ತಿರುವ ಸುಬ್ರಹ್ಮಣ್ಯ ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠ

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ಸುಬ್ರಹ್ಮಣ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸುಬ್ರಹ್ಮಣ್ಯ ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠದ ಗೋಶಾಲೆಯಲ್ಲಿ 60 ಕ್ಯೂಬಿಕ್ ಮೀಟರ್ ಸಾಮರ್ಥ್ಯದ ಗೋಬರ್ ಧನ್ ಘಟಕವನ್ನು ನಿರ್ಮಾಣ ಮಾಡಲಾಗಿದೆ. ಈ ಗೋಬರ್ ಧನ್ ಘಟಕದಿಂದ ಜಾನುವಾರುಗಳ ಸಗಣಿಯ ಸಮರ್ಪಕ ನಿರ್ವಹಣೆ ಆಗುತ್ತಿರುವುದಲ್ಲದೆ ಪ್ರತಿ ವರ್ಷ ಅಂದಾಜು 9.82 ಲಕ್ಷ ರೂ ಆದಾಯ ಕೂಡ ಸಿಗುತ್ತಿದೆ.

ಸುಬ್ರಹ್ಮಣ್ಯ ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠದ ಗೋಶಾಲೆಯು ಪ್ರಸ್ತುತ 187 ಹಸುಗಳು ಮತ್ತು ಕರುಗಳು ಹೊಂದಿದ್ದು ಪ್ರತಿದಿನ ಜಾನುವಾರುಗಳಿಂದ 651 ಕೆಜಿ ಯಷ್ಟು ತ್ಯಾಜ್ಯವು ಉತ್ಪತ್ತಿಯಾಗುತ್ತಿದೆ. ಈ ತ್ಯಾಜ್ಯದೊಂದಿಗೆ 255 ಕೆಜಿ ಆಹಾರ ತ್ಯಾಜ್ಯ ಹಾಗೂ ಹೂವಿನ ತ್ಯಾಜ್ಯವನ್ನು ಸೇರಿಸಿ ಒಟ್ಟು 906 ಕೆ.ಜಿ ಯಷ್ಟು ತ್ಯಾಜ್ಯದ ಸಂಗ್ರಹಣೆಯಾಗುತ್ತಿದೆ.

ವಿದ್ಯುದ್ದೀಕರಣ, ಸ್ಲರಿ ಪಂಪ್, ಸ್ಕ್ರಬ್ಬರ್, ಹಸುವಿನ ಸಗಣಿ ಮಿಕ್ಸರ್, ಬರ್ನರ್ ಮತ್ತು ಇತರ ವೆಚ್ಚಗಳನ್ನು ಒಳಗೊಂಡಂತೆ ರೂ.18.95 ಲಕ್ಷ ವೆಚ್ಚದಲ್ಲಿ ಜೈವಿಕ ಅನಿಲ ಘಟಕ (ಗೋಬರ್ ಧನ್) ನಿರ್ಮಿಸಲಾಗಿದೆ.

ಗೋಬರ್ ಧನ್ ಘಟಕದ ನಿರ್ಮಾಣದ ಮೂಲಕ ಸುಬ್ರಹ್ಮಣ್ಯ ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠವು ತ್ಯಾಜ್ಯ ನಿರ್ವಹಣೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆಯ ಬಗ್ಗೆ ಅಷ್ಟೇ ಅಲ್ಲದೇ, ಸ್ಥಳೀಯ ಸಮುದಾಯಗಳಲ್ಲಿ ಉದ್ಯೋಗ ಸೃಷ್ಟಿಸುವುದು, ಹಾಗೂ ಅಭಿವೃದ್ಧಿಗೊಳಿಸುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಇಲ್ಲಿನ ಗೋಬರ್ ಧನ್ ಘಟಕದಲ್ಲಿ ಪ್ರತಿದಿನ 2000 ಲೀಟರ್ ಬಯೋಸ್ಲರಿ ಉತ್ಪಾದನೆಯಾಗುತ್ತದೆ. ಇದನ್ನು ಕೃಷಿಗೆ ಸಾವಯವ ಗೊಬ್ಬರವನ್ನಾಗಿ ಬಳಸಲಾಗುತ್ತದೆ. ಪೋಷಕಾಂಶಗಳಿಂದ ಸಮೃದ್ಧವಾಗಿರುವ ಈ ಗೊಬ್ಬರವು ಸುಸ್ಥಿರ ಮತ್ತು ಪರಿಸರ ಸ್ನೇಹಿ ಕೃಷಿ ಪದ್ದತಿಗಳನ್ನು ಉತ್ತೇಜಿಸುತ್ತದೆ. ಇದಷ್ಟೇ ಅಲ್ಲದೇ ಹೆಚ್ಚು ದುಬಾರಿಯಾಗಿರುವ ಗ್ಯಾಸ್ ಸಿಲಿಂಡರ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿದೆ.

ಗೋಶಾಲೆಯಲ್ಲಿ ಉತ್ಪಾದನೆಯಾಗುವ ಸಗಣಿ ಹಾಗೂ ಆಹಾರ ತ್ಯಾಜ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಇಂದು ಸುಬ್ರಹ್ಮಣ್ಯ ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠವು ಮಾದರಿಯಾಗಿದೆ.





## ಗೋಬರ್ ಧನ್ ಉಪಯೋಗ

ಜಾನುವಾರು ತ್ಯಾಜ್ಯ, ಹಸಿ ತ್ಯಾಜ್ಯ ಮತ್ತು ಕೃಷಿ ತ್ಯಾಜ್ಯವನ್ನು ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸಿ ಹಳ್ಳಿಗರ ಜೀವನಮಟ್ಟವನ್ನು ಸುಧಾರಿಸುವಲ್ಲಿ ಹಾಗೂ ಪ್ರತಿ ಗ್ರಾಮವನ್ನು ಸ್ವಚ್ಛವಾಗಿಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ (ಎಸ್‌ಬಿಎಂ–ಜಿ) ಮೂಲಕ ಉತ್ತೇಜಿಸಲಾದ ಯೋಜನೆಯು ಜೈವಿಕ ಅನಿಲ ಸ್ಥಾವರಗಳ ಮೂಲಕ ಕೃಷಿ ಮತ್ತು ಪ್ರಾಣಿಗಳ ತ್ಯಾಜ್ಯವನ್ನು ಬಳಸಿಕೊಂಡು ಶಕ್ತಿಯ ಸ್ವಾವಲಂಬನೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ. ಜೈವಿಕ ಅನಿಲ ಸ್ಥಾವರಗಳ ನಿರ್ಮಾಣ, ನಿರ್ವಹಣೆ ಮತ್ತು ದಿನನಿತ್ಯದ ಕಾರ್ಯಾಚರಣೆಗಳಲ್ಲಿ ಗ್ರಾಮ ಜನರು, ವಿಶೇಷವಾಗಿ ಸ್ವ–ಸಹಾಯ ಗುಂಪುಗಳ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುವ ಮೂಲಕ ಅವರ ಸಬಲೀಕರಣಕ್ಕೆ ಪ್ರಾಮುಖ್ಯತೆ ನೀಡುತ್ತಿದೆ.

ಈ ಯೋಜನೆಯು ವಿಶೇಷವಾಗಿ ಗ್ರಾಮೀಣ ಯುವಕರು ಮತ್ತು ಮಹಿಳೆಯರಿಗೆ, ತ್ಯಾಜ್ಯ ಸಂಗ್ರಹಣೆ, ಗೋಬರ್ ಧನ್ ಘಟಕ ನಿರ್ವಹಣೆ ಮತ್ತು ಜೈವಿಕ ಅನಿಲ ಮಾರಾಟ ಮತ್ತು ವಿತರಣೆಯಂತಹ ವಿವಿಧ ಕಾರ್ಯಗಳಲ್ಲಿ ಅವರನ್ನು ತೊಡಗಿಸಿಕೊಳ್ಳುವ ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ.

**ಮನೆಗಳಲ್ಲಿ ಜಾನುವಾರಗಳು ಇದ್ದರೆ, ಹಸಿ ಕಸ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿದ್ದರೆ**

**ಗೋಬರ್ - ಧನ್ ನಿರ್ಮಿಸಿ**

